ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಈರಣ್ಣ | ಪ್ರಾಸಾಃ 10 |
| ತಂದೆಯ ಹೆಸರು | : | ಬಸವರಾಜ್ | ಚಾಸಾಃ 21 |
| ಪ್ರಾಯ | : | 26 ವರ್ಷ | **ದಿನಾಂಕಃ 09.09.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪಿಸಿ 381 ಬಜ್ಪೆ ಪೊಲೀಸ್ ಠಾಣೆ | |
| ವಾಸಸ್ಥಳ | : | ಬಜ್ಪೆ | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಡಿಸೆಂಬರ್ 2021 ರಿಂದ ಇಲ್ಲಿಯವರೆಗೆ ಮಂಗಳೂರಿನ ಬಜ್ಪೆ ಪೊಲೀಸ್ ಠಾಣೆ ಯಲ್ಲಿ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 12.12.2022 ರಂದು ಬೆಳಗ್ಗೆ ಠಾಣೆಯಲ್ಲಿ ಬ್ರೀಫಿಂಗ್ ಗೆ ಹಾಜರಾದಾಗ ಈ ಪ್ರಕರಣದ ತನಿಖಾಧಿಕಾರಿಯವರಾದ ಚಾಸಾ-28 ರವರು ಈ ಪ್ರಕರಣದಲ್ಲಿ ವಶಪಡಿಸಿಕೊಂಡ 18 ಸ್ವತ್ತುಗಳನ್ನು ಮಂಗಳೂರು RFSL ಗೆ ನೀಡುವಂತೆ ಆದೇಶಿಸಿದ್ದು ಅದರಂತೆ ನಾನು ಸದರಿ ಸ್ವತ್ತುಗಳನ್ನು ಅದೇ ದಿನ ನಾನು ಮಂಗಳೂರಿನ RFSL ಅಧಿಕಾರಿಯವರಿಗೆ ಒಪ್ಪಿಸಿದ್ದು ಅವರು ನೀಡಿದ ಸ್ವೀಕೃತಿಯನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇನೆ. ಆ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಕೆ.ಡಿ.ಎಸ್. ವಕೀಲರಿಂದಃ-**

3. ಬೆಳಗ್ಗೆ 10.30 ರಿಂದ 11.00 ಗಂಟೆಯ ಸಮಯದಲ್ಲಿ ಮೇಲೆ ಹೇಳಿದ ಸ್ವತ್ತುಗಳನ್ನು ನನ್ನ ಸುಪರ್ದಿಗೆ ನೀಡಲಾಗಿರುತ್ತದೆ. ಸದರಿ 18 ಸ್ವತ್ತುಗಳನ್ನು

ಪ್ರತ್ಯೇಕವಾಗಿ ಪ್ಯಾಕ್ ಮಾಡಲಾಗಿತ್ತು. ನಿಮಗೆ ನಿಮ್ಮ ಮೇಲಾಧಿಕಾರಿಯವರು ಸ್ವತ್ತುಗಳನ್ನು ಹಸ್ತಾಂತರಿಸುವ ಸಮಯದಲ್ಲಿ Chain of custody ವರದಿಯನ್ನು ಕೊಟ್ಟಿರುತ್ತಾರಾ ಎಂದರೆ ರಹದಾರಿ ಪತ್ರದಲ್ಲಿ ನಮೂದಿಸಿ ನೀಡಿರುತ್ತಾರೆ. ಸದರಿ ರಹದಾರಿಯಲ್ಲಿ ಮೇಲಾಧಿಕಾರಿಗಳ ಬಳಿ ಸದರಿ ಸ್ವತ್ತುಗಳು ಎಷ್ಟು ಸಮಯ ಇದ್ದವು ಎಂಬ ಬಗ್ಗೆ ಉಲ್ಲೇಖ ಇರಲಿಲ್ಲ.

4. ನಾನು ಮದ್ಯಾಹ್ನ 12.00 ಗಂಟೆಗೆ ಮಂಗಳೂರಿನ RFSL ಕಚೇರಿಗೆ ಸದರಿ ಸ್ವತ್ತುಗಳನ್ನು ಹಸ್ತಾಂತರಿಸಿರುತ್ತೇನೆ. ಆ ಸಮಯದಲ್ಲಿ ರಹದಾರಿ ಪತ್ರದಲ್ಲಿ RFSL ರವರು ಸ್ವೀಕೃತಿಯ ಬಗ್ಗೆ ಅದರ ಮೇಲೆ ಸಹಿ ಮತ್ತು ಸೀಲು ಹಾಕಿ ನನಗೆ ನೀಡಿರುತ್ತಾರೆ. ನನಗೆ ನೀಡಿದ ರಹದಾರಿ ಪತ್ರದಲ್ಲಿ ಸದರಿ ಸ್ವತ್ತುಗಳ ಬಗ್ಗೆ chain of custody ನಮೂದು ಇರಲಿಲ್ಲ. ಸದರಿ ಸ್ವತ್ತುಗಳನ್ನು RFSL ಅಧಿಕಾರಿಗೆ ನೀಡುವ ಸಮಯದಲ್ಲಿ ನಾನು chain of custody ಯ ವರದಿಯನ್ನು ನೀಡಿರುವುದಿಲ್ಲ. ರಹದಾರಿ ಪತ್ರವನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.